

'ಉಪ್ಪಾಡ್ ಪಚ್ಚಿಲ್ ಪಾಡುನೆ' ಆಚರಣೆಗೆ ಸಂಗ್ರಹಗೊಂಡ ಹಲಸು



ಇರಬಲ್ಲದು. ಇದನ್ನು ಬಳಸಿ ವರ್ಷದ ಯಾವ ಸಮಯದಲ್ಲೂ ಹಲಸಿನ ಕಾಯಿಯ ಪದಾರ್ಥವನ್ನು ಮಾಡಿ ಸವಿಯಬಹುದು. ಅಂದಹಾಗೆ, ಉಪ್ಪಲ್ಲಿ ಹಾಕುವ ಹಲಸಿನಕಾಯಿ ಹಣ್ಣಾಗಿರಬಾರದು. ಎಳೆಯದೂ ಆಗಿರಬಾರದು. ಹಣ್ಣಾಗಿದ್ದರೆ ಅಥವಾ ಸರಿಯಾಗಿ ಬೆಳೆದಿರದಿದ್ದರೆ ಬೇಗನೆ ಹಾಳಾಗುವ ಸಾಧ್ಯತೆಗಳಿರುತ್ತವೆ.

## ಕೋವಿಡ್ ಕಾಲಘಟ್ಟದ ಹೊಳಹು

'ಉಳ್ಳಾಕ್ಲು ಧೂಮಾವತಿ ಮಲರಾಯ ದೈವಸ್ಥಾನ'ದಲ್ಲಿ 'ಉಪ್ಪಾಡ್ ಪಚ್ಚಿಲ್ ಪಾಡುನೆ' ಕಾರ್ಯಕ್ರಮ ಶುರು ಆದದ್ದು ಮೂರು ವರ್ಷಗಳ ಹಿಂದೆ ಲಾಕ್‌ಡೌನ್ ಕಾಲದಲ್ಲಿ. ಶುರು ಆಗಲು ಕಾರಣ ದೈವಸ್ಥಾನದ ಆಡಳಿತ ಮಂಡಳಿಯ ಕೋಶಾಧಿಕಾರಿಯಾದ ಕುದುಮಾನ್ ಚೆನ್ನಪ್ಪ ಗೌಡರು.

ಪ್ರತಿ ಸಂಕ್ರಮಣದ ದಿವಸ ಈ ದೈವಸ್ಥಾನದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಅಂದು ಊರ ಹಾಗೂ ಪರವೂರಿನ ಭಕ್ತರು ನೂರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಅವರೆಲ್ಲರಿಗೂ ಊಟ ಇದೆ.

ಚೆನ್ನಪ್ಪ ಗೌಡರು ಒಂದು ದಿನ ಮೀಟಿಂಗ್‌ನಲ್ಲಿ – 'ಘಟ್ಟದಿಂದ ಬರುವ ತರಕಾರಿ ವಿಷಮಯವಾಗಿರುತ್ತದೆ. ಹಲಸು ಕೆಮಿಕಲ್‌ಮುಕ್ತ. ಆದರೂ ಬಳಸುವವರಿಲ್ಲದೆ ಕೊಳೆತುಹೋಗುತ್ತದೆ. ದೈವಸ್ಥಾನದ ಊಟಕ್ಕೆ ಒಂದು ಹಲಸಿನ ಅಡುಗೆ ಮಾಡಿದರೆ ಹೇಗೆ? ಹಲಸಿನ ಸೊಳೆಯನ್ನು ಉಪ್ಪಲ್ಲಿ ಹಾಕಿಟ್ಟರೆ ಸೀಸನ್ ಮುಗಿದಾಗಲೂ ಅಡುಗೆಗೆ ಲಭ್ಯ ಇರುತ್ತದೆ. ತರಕಾರಿಗೆ ಕೊಡುವ ದುಡ್ಡು ಅಷ್ಟರಮಟ್ಟಿಗೆ ಉಳಿಯುತ್ತದೆ. ಭಂಡಾರಕ್ಕೆ ಲಾಭ ಆಗುತ್ತದೆ' ಎಂಬ ವಿಚಾರವನ್ನು ಮುಂದಿಟ್ಟರು. ಆ ಮಾತನ್ನು ಆಡಳಿತ ಮಂಡಳಿಯ ಅಧ್ಯಕ್ಷ ಮೈರಜೆ ಕೃಷ್ಣ ಭಟ್ ಅವರು ಅನುಮೋದಿಸಿ ಅನುಷ್ಠಾನಕ್ಕೆ ತಂದರು. ಅಂದಿನಿಂದ ಇಲ್ಲಿ ಪ್ರತಿ ಸಂಕ್ರಮಣದ ದಿವಸ ಉಪ್ಪಲ್ಲಿ ಹಾಕಿದ ಸೊಳೆ (ಉಪ್ಪಾಡ್ ಪಚ್ಚಿಲ್)ಗೆ ಕಡ್ಲೆ ಸೇರಿಸಿ ಪಲ್ಯ ಮಾಡುವುದು ಪದ್ಧತಿ ಆಯಿತು. ಸಾರು, ಸಾಂಬಾರು ಇದ್ದರೂ ಜನರು ಅದಕ್ಕಿಂತಲೂ ಹೆಚ್ಚು ಈ ಪಲ್ಯವನ್ನು ಇಷ್ಟಪಟ್ಟು ತಿನ್ನುತ್ತಾರೆ. ಇದಕ್ಕಾಗಿ ಸುಮಾರು 100 ಹಲಸಿನಕಾಯಿಗಳನ್ನು ಮೂರ್ನಾಲ್ಕು ದೊಡ್ಡ ಡ್ರಮ್‌ಗಳಲ್ಲಿ ಹಾಕಿಡುತ್ತಾರೆ.

## ಧರ್ಮಾತೀತ ಆಚರಣೆ

'ಉಪ್ಪಾಡ್ ಪಚ್ಚಿಲ್ ಪಾಡುನೆ' ಕಾರ್ಯಕ್ರಮದಲ್ಲಿ ಹಿಂದೂಗಳು ಮಾತ್ರವಲ್ಲ ಮುಸ್ಲಿಮರೂ ಭಾಗವಹಿಸುತ್ತಾರೆ. ಇವರಲ್ಲಿ ಬಿಸಿನೆಸ್ ಮಾಡುವವರು, ಮರದ ವ್ಯಾಪಾರಸ್ಥರು, ಅಡಿಕೆ ಸುಲಿಯುವವರು, ನಿವೃತ್ತ ಸರ್ಕಾರಿ ಅಧಿಕಾರಿಗಳು, ಗೃಹಿಣಿಯರು, ಕೃಷಿಕರು, ಕೂಲಿ ಕಾರ್ಮಿಕರು – ಹೀಗೆ ಬೇರೆಬೇರೆ ವೃತ್ತಿಗಳಿಗೆ ಸೇರಿದವರಿದ್ದಾರೆ.

ಆಚರಣೆಗೆ ಬಂದವರೆಲ್ಲರೂ ತಮ್ಮ ಮನೆಯ ಮದುವೆ ಕಾರ್ಯಕ್ರಮವೇನೋ ಎಂಬಂತೆ ಹರಟೆ ಹೊಡೆಯುತ್ತಾ ಹಲಸಿನಕಾಯಿಗಳನ್ನು ಕತ್ತರಿಸುವುದನ್ನು ನೋಡುವುದೇ ಒಂದು ಸೊಬಗು. ಈ ಕೆಲಸ ಹೊತ್ತು ಮುಳುಗುವಲ್ಲಿವರೆಗೂ ಇರುತ್ತದೆ. ಎಲ್ಲರಿಗೂ ದೈವಸ್ಥಾನದ ವತಿಯಿಂದ ಬೆಳಿಗ್ಗೆ ಅವಲಕ್ಕಿ–ಚಾ, ಮಧ್ಯಾಹ್ನ ಗಂಜಿ–ಚಟ್ನಿ ಹಾಗೂ ಸಂಜೆ ಚಾ–ಪೋಡಿ ಸರಬರಾಜು ಇರುತ್ತದೆ.

ಕರಾವಳಿ ಜಿಲ್ಲೆಗಳಲ್ಲಿ ಹಲಸು ಹೇರಳವಾಗಿ ಲಭ್ಯ. ಹಲವು ಪೌಷ್ಟಿಕಾಂಶಗಳ ಆಗರವಾದ ಹಲಸು ಅಲಕ್ಷಿತ ಹಣ್ಣು. ಅನೇಕ ಸಂದರ್ಭಗಳಲ್ಲಿ ಹಲಸಿನಕಾಯಿ ಮರದಲ್ಲೇ ಹಣ್ಣಾಗಿ, ಕೊಳೆತು ಬಿದ್ದು ಮಣ್ಣು ಸೇರುತ್ತದೆ. ಈ ಹಿನ್ನೆಲೆಯಲ್ಲಿ ಹಲಸಿನಕಾಯಿಗೆ ಕಾಯಕಲ್ಪ ಒದಗಿಸುವ 'ಉಪ್ಪಾಡ್ ಪಚ್ಚಿಲ್ ಪಾಡುನೆ'ಯಂತಹ ವಿಶಿಷ್ಟ ಪ್ರಯೋಗಗಳು ಸದಾ ಅನುಕರಣೀಯ. ಹಲಸನ್ನು ಮೌಲ್ಯಯುತವಾಗಿ ಬಳಸುತ್ತಿರುವ ಉಳ್ಳಾಕ್ಲು ಧೂಮಾವತಿ ಮಲರಾಯ ದೈವಸ್ಥಾನದ ಆಡಳಿತ ಮಂಡಳಿಯವರು ನಿಜಕ್ಕೂ ಅಭಿನಂದನಾರ್ಹರು. ಆಹಾರ ಸುರಕ್ಷತೆ ಒದಗಿಸುವ ಹಲಸಿನ ಮೌಲ್ಯವರ್ಧನೆಯತ್ತ ಹೆಜ್ಜೆಯಿರಿಸಿದ ಈ ದೈವಸ್ಥಾನ ಹಲಸು ಬೆಳೆಯುವ ಪ್ರದೇಶಕ್ಕೆಲ್ಲಾ ಮಾದರಿ. ಸಂಕ್ರಮಣದ ದಿನ ನೀವೂ ಕೆದಿಲ ಶ್ರೀ ಉಳ್ಳಾಕ್ಲು ಧೂಮಾವತಿ ಮಲರಾಯ ದೈವಸ್ಥಾನಕ್ಕೆ ಹೋಗಿ ಉಪ್ಪಾಡ್ ಪಚ್ಚಿಲ್ ಪಲ್ಯವನ್ನು ಸವಿಯಿರಿ. ಭಕ್ತಿಯೊಂದಿಗೆ, ಹಲಸಿನ ಶಕ್ತಿಯನ್ನು ಯುಕ್ತಿಯಿಂದ ಬಳಸಿಕೊಳ್ಳುವುದು ಹೇಗೆ ಎನ್ನುವುದನ್ನು ಅರಿಯುವುದಕ್ಕೂ ಮಲರಾಯ ದೈವಸ್ಥಾನದ ಭೇಟಿ ಅವಕಾಶ ಕಲ್ಪಿಸಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in